ಅಸಲು ದಾವಾ ನಂ. 17/2021 ಡಿಡಬ್ಲೂ : 1

ದಿನಾಂಕಃ 08-08-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿಯ ಪರವಾಗಿಃ ಶ್ರೀ ಎನ್ ಎಮ್ ಎನ್ ವಕೀಲರಿಂದಃ**

10. ಶಾರದಾ ಗೋಪಿಯವರು ಚಂದ್ರಕಾಂತ ಇವರ ತಂದೆಯ ಸಹೋದರನಾದ ವಿಶ್ವೇಶ್ವರ ಇವರ ಹೆಂಡತಿ ಎಂದರೆ ಸರಿ. ವಿಶ್ವೇಶ್ವರ ಗೋಪಿಯವರಿಗೆ ಯಾವುದೇ ಮಕ್ಕಳಿರಲಿಲ್ಲ ಎಂದರೆ ಸರಿ . ವಿಶ್ವೇಶ್ವರ ಗೋಪಿ ಇವರು ಧಾರೇಶ್ವರದಲ್ಲಿ ವಾಸ ಮಾಡಿಕೊಂಡಿದ್ದರು ಎಂದರೆ ಸರಿ . ವಿಶ್ವೇಶ್ವರ ಗೋಪಿಯವರು ಯಾವ ಇಸ್ವಿಯಲ್ಲಿ ತೀರಿಕೊಂಡಿದ್ದಾರೆ ನೆನಪಿಲ್ಲ. ಶಾರದಾ ಗೋಪಿಯವರು ಅಂದಾಜು 2019-2020 ರಲ್ಲಿ ತೀರಿಕೊಂಡಿರಬಹುದು ನೆನಪಿಲ್ಲ. ವಿಶ್ವೇಶ್ವರ ಗೋಪಿ ಹಾಗೂ ಶಾರದಾ ಗೋಪಿರವರಿಗೆ ಮಕ್ಕಳಿಲ್ಲದ ಕಾರಣ 1 ರಿಂದ 3 ನೇ ವಾದಿ ಹಾಗೂ 1 ನೇ ಪ್ರತಿವಾದಿ ಅವರ 2 ನೇ ದರ್ಜೆಯ ವಾರಸುದಾರರು ಎಂದರೆ ಸರಿ. ದಾವ ಆಸ್ತಿಯ ಪಹಣಿಯನ್ನು ಆಗ ನೋಡಿದ್ದೇನೆ ಈಗ ನೆನಪಿಲ್ಲ . 2011 ರಲ್ಲಿ ಪಹಣಿಯನ್ನು ನೋಡಿದ್ದೆ. ಆ ಸಮಯದಲ್ಲಿ ದಾವಾ ಪಹಣಿ ಪತ್ರಿಕೆಯಲ್ಲಿ ಪ್ರಭಾವತಿ ಗೋಪಿ , ವಾದಿಯರು ಮತ್ತು 1 ನೇ ಪ್ರತಿವಾದಿ ಹಾಗೂ ವಿಶ್ವೇಶ್ವರ ಗೋಪಿ ರವರ ಹೆಸರು ದಾಖಲಿತ್ತು.

11. ವಾದಿಯರು ಹಾಗೂ ಪ್ರತಿವಾದಿ 1 ರವರು ಕುಮಟಾಕ್ಕೆ ಬಂದು ನನಗೆ ಜಿಪಿಎ ಕೊಟ್ಟಿರುತ್ತಾರೆ . ವಾದಿ , ವಾದಿಯರ ತಾಯಿ ಹಾಗೂ ಪ್ರತಿವಾದಿ ನಂ.1 ಇವರು ಜಿಪಿಎ ನ್ನು ಕೊಡುವ ಉದ್ದೇಶದ ಬಗ್ಗೆ ಹೇಳಿದರು. ಯೋಗರಾಜ ಗೋಪಿ ಇವರು ದಾಂಡೇಲಿಯ ಪೇಪರ ಮಿಲ್ ನಲ್ಲಿ ಕೆಲಸ ಮಾಡುತ್ತಿದ್ದರು . ಅವರಿಗೆ ಒಬ್ಬ ಮಗನಿದ್ದಾನೆ . ಅವನು ಈಗ ಏನು ಓದುತ್ತಿದ್ದಾನೆ ನೆನಪಿಲ್ಲ . ಯೋಗರಾಜರವರ ಹೆಂಡತಿ ಮನೆಗೆಲಸ ಮಾಡಿಕೊಂಡಿದ್ದಾರೆ .

12. ಶುಭಾರವರು ಮುಂಬಯಿಯಲ್ಲಿ ಇರುತ್ತಾರೆ . ಜಿಪಿಎ ಪಡೆಯುವ ಮೊದಲು ನಾನು ದಾಂಡೇಲಿಗೆ ಹೋಗಿ ಯಾವುದೇ ದಾಖಲಾತಿ ಪಡೆದಿಲ್ಲ , ಆದರೆ ಅವರೇ ನನಗೆ ಗೋಕರ್ಣಕ್ಕೆ ಬಂದಾಗ ದಾಖಲಾತಿಗಳನ್ನು ಕೊಟ್ಟಿದ್ದರು . ಜಿಪಿಎನ್ನು ನೀಡಿದಾಗ ಶಾರದಾ ದೇವಿಯವರು ಧಾರೇಶ್ವರದಲ್ಲಿ ವಾಸವಾಗಿದ್ದರು. ಮೊದಲನೇ ಜಿಪಿಎ ಮಾಡುವಾಗ ವಾದಿ , ವಾದಿಯರ ತಾಯಿ ಹಾಗೂ ಅವರ ವಕೀಲರು ಹಾಜರಿದ್ದರು . ಜಿಪಿಎ ಗೆ ಬೇಕಾದ ಬಾಂಡ್ ನ್ನು ಯೋಗರಾಜರವರು ತಂದಿದ್ದರು. ಎಲ್ಲಿಂದ , ಯಾವಾಗ ತೆಗೆದುಕೊಂಡು ಬಂದಿದ್ದರು ನೆನಪಿಲ್ಲ. ಬಾಂಡ್ ಪೇಪರನ್ನು ನೋಡಿದ್ದು ನೆನಪಿಲ್ಲ . ಬಾಂಡ್ ಪೇಪರನ್ನು ದಾವೆ ದಾಖಲಾದ ನಂತರ ನೋಡಿದ್ದೇನೆ . ಸೆಕೆಂಡ್ ಪಾರ್ಟಿ ಹೆಸರು ನಮೂದು ಆಗಿರುವುದಿಲ್ಲ ಎಂದರೆ ಸರಿ . ಜಿಪಿಎ ಪಡೆದುಕೊಂಡ ನಂತರ ಯಾವ ಯಾವ ಸ್ಥಳದಲ್ಲಿ ಅತೀಕ್ರಮಣ ಆಗಿದೆ ಅದನ್ನು ತೆರವು ಗೊಳಿಸಲು ಕ್ರಮವನ್ನು ಕೈಗೊಂಡಿದ್ದೇನೆ . ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 135/2011 ನ್ನು ದಾಖಲಿಸಿ ಆಸ್ತಿ ರಕ್ಷಣೆಗೋಸ್ಕರ ಕೇಸನ್ನು ದಾಖಲಿಸಿದ್ದೇನೆ. ಯಾರು ಯಾರು ಅತೀಕ್ರಮಣ ಮಾಡಿದ್ದರು ಅವರ ಜೊತೆಗೆ ಮಾತುಕತೆ ಮಾಡಿಸಿ ಅವರ ಮನ ಒಲಿಸಿ ಆ ಜಾಗವನ್ನು ಅವರಿಗೆ ಮಾರಾಟ ಮಾಡಿದ್ದರಿಂದ ಕೇಸನ್ನು ವಾಪಸ್ಸು ತೆಗೆದುಕೊಳ್ಳಬೇಕಾಯಿತು. ಕೇಸನ್ನು ಯಾವ ಇಸ್ವಿಯಲ್ಲಿ ವಾಪಸ್ಸು ಪಡೆದುಕೊಂಡಿದ್ದೆನು ನೆನಪಿಲ್ಲ. ಯಾವ ಕಾರಣಕ್ಕೆ ಪ್ರಕರಣವನ್ನು ವಾಪಸ್ಸು ತೆಗೆದುಕೊಳ್ಳಲಾಗಿದೆ ಎಂದು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ , ಈಗ ನನಗೆ ನೆನಪಿಲ್ಲ. ಯಾವ ಕಾರಣಕ್ಕಾಗಿ ವಾಪಸ್ಸು ತೆಗೆದುಕೊಳ್ಳುತ್ತಿದ್ದೇನೆ ಎಂದು ಅದರಲ್ಲಿ ಬರೆದಿದ್ದೆ , ನೆನಪಿಲ್ಲ. ಈ ಕೇಸಿನ ವಾದಿಯರನ್ನು ಅಸಲು ದಾವೆ ಸಂಖ್ಯೆ 135/2011 ರಲ್ಲಿ ಪ್ರತಿವಾದಿಯರನ್ನಾಗಿ ತೋರಿಸಿದ್ದೇನೆ ಎಂದರೆ ನೆನಪಿಲ್ಲ . ಆ ಪ್ರಕರಣದಲ್ಲಿ ವಾದಿಯರಿಗೆ ನೋಟಿಸು ಜಾರಿಯಾಗಿದ್ದು ಅವರು ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಅವರನ್ನು ಏಕಪಕ್ಷೀಯವಾಗಿ ಪರಿಗಣಿಸಲಾಗಿದೆ ಎಂದರೆ ನೆನಪಿಲ್ಲ . ಕೇಸನ್ನು ವಾಪಸ್ಸು ತೆಗೆದುಕೊಳ್ಳುವವರೆಗೂ ವಾದಿಯರು ಆ ಕೇಸಿನಲ್ಲಿ ಹಾಜರಾಗಿಲ್ಲ ಎಂದರೆ ಸಾಕ್ಷಿ ವಾದಿಯರ ಪರವಾಗಿ ನಾನು ಹಾಜರಾಗಿದ್ದೆ ಎಂದು ನುಡಿದಿರುತ್ತಾರೆ . ಯಾರು ಯಾರು ಎಷ್ಟು ಅತೀಕ್ರಮಣ ಮಾಡಿದ್ದಾರೆ ಆ ಬಗ್ಗೆ ದಾವೆಯಲ್ಲಿ ಸರ್ವೆಯರ್

ಮೂಲಕ ಅಳತೆ ಮಾಡಿಸಿರುತ್ತೇನೆ , ಅದರ ಮೇರೆಗೆ ನ್ಯಾಯಾಲಯವು ಕೂಡ ಡಿಡಿಎಲ್ ಆರ್ ಮೂಲಕ ಅಳತೆ ಮಾಡಿಸಿರುತ್ತದೆ. ಜಿಪಿಎ ತೆಗೆದುಕೊಳ್ಳುವ ಮೊದಲು ನಾನು ದಾವಾ ಆಸ್ತಿಯನ್ನು ಒಂದು ಬಾರಿ ನೋಡಿದ್ದೆ . ಅತೀಕ್ರಮಣವನ್ನು ತೆರವು ಗೊಳಿಸಲು ಮಾತ್ರ ನನಗೆ ಜಿಪಿಎ ಕೊಡಲಾಗಿತ್ತು , ಮಾರಾಟ ಮಾಡುವ ಉದ್ದೇಶದಿಂದ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ . ಜಿಪಿಎ ನಲ್ಲಿ ವಾದಿಯರ ಮತ್ತು 1 ನೇ ಪ್ರತಿವಾದಿಯರ ಸ್ವಂತ ಸ್ಥಳ ಕಬ್ಜಾ ಎಂದು ಬರೆದಿದ್ದಾರೆ ಎಂದರೆ ನೆನಪಿಲ್ಲ . ಜಿಪಿಎ ಆಧಾರದ ಮೇಲೆ ಜಮೀನನ್ನು ಮಾರಾಟ ಮಾಡಿದಾಗ ನಾನು ಸ್ಟಾಂಪ್ ಡ್ಯೂಟಿ ಕಟ್ಟಿದ್ದೇನೆ . ಪವರ ಆಫ್ ಅರ್ಟನಿ ಮಾಡುವಾಗ ಹಾಗೂ ಸೇಲ್ ಡೀಡ್ ಮಾಡುವಾಗ ಸ್ಟಾಂಪ್ ಡ್ಯೂಟಿ ಕಟ್ಟಿದ್ದೇನೆ. ವಕೀಲರ ಬಳಿ ಹೋದಾಗ ಅದು ರಜಿಸ್ಟರ್ ಜಿಪಿಎ ಅಲ್ಲ ಕಾರಣ ಆಸ್ತಿ ಮಾರಾಟ ಮಾಡಲು ಬರುವುದಿಲ್ಲ ಎಂದು ವಕೀಲರು ಹೇಳಿದ್ದರಾ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿದಿರುತ್ತಾರೆ . ನಾನು ಅಗತ್ಯದ ಪ್ರಶ್ನೆಗಳನ್ನು ಉತ್ತರಿಸುವ ಬದಲು ನೆನಪಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. ಶಾರದಾ ಗೋಪಿಯವರು ಜಿಪಿಎ ನೀಡುವಾಗ ನಾನು , ಶಾರದಾ ಗೋಪಿ ಮತ್ತು ವಕೀಲರು ಹಾಜರಿದ್ದರು. ಸದರಿ ಜಿಪಿಎ ನ್ನು ಕುಮಟಾದಲ್ಲಿ ಮಾಡಿರುತ್ತಾರೆ . ಎರಡು ಜಿಪಿಎಗಳನ್ನು ಕುಮಟಾದಲ್ಲಿ ತಯಾರಿಸಿರುತ್ತಾರೆ. ಸದರಿ ಜಿಪಿಎಗಳನ್ನು ವಕೀಲರಾದ ಶ್ರೀ ಪಿ ಜಿ ಹೆಚ್ ವಕೀಲರ ಕಚೇರಿಯಲ್ಲಿ ತಯಾರಿಸಿರುತ್ತಾರೆ . ಮೊದಲನೇ ಜಿಪಿಎ ಮಾಡುವ ಸಮಯದಲ್ಲಿ ವಾದಿಯರಿಗೆ ಮತ್ತು 1 ನೇ ಪ್ರತಿವಾದಿಗೆ ಯಾವುದೇ ಹಣವನ್ನು ನೀಡಿದ್ದು ಇರುವುದಿಲ್ಲ . ಆಸ್ತಿ ರಕ್ಷಣೆ ಮತ್ತು ಮಾರಾಟಗೋಸ್ಕರ ಜಿಪಿಎ ತೆಗೆದುಕೊಂಡದ್ದಾಗಿತ್ತು , ಕಾರಣ ಜಿಪಿಎ ತೆಗೆದುಕೊಂಡ ಸಮಯದಲ್ಲಿ ಹಣವನ್ನು ಕೊಡಲು ಆಗುವುದಿಲ್ಲ ಎಂದು ನುಡಿದಿರುತ್ತಾರೆ. ಶಾರದಾ ಗೋಪಿಯವರಿಂದ ಜಿಪಿಎ ಪಡೆದಾಗ ಅವರಿಗೆ ಯಾವುದೇ ಹಣವನ್ನು ನೀಡಿಲ್ಲ. ಸುಕ್ರು ಕಾರೆ ಗೌಡಾ ಇವರಿಗೆ ಸರ್ವೆ ನಂ . 1678 ಮಾರಾಟ ಮಾಡಿರಬಹುದು. ಭಾಗ್ಯರೇಖಾ ಗಣೇಶ ಅಡಿಮೂಳೆ ಎಂದರೆ ನನ್ನ ಹೆಂಡತಿ. ಇವರು ಸ್ವತ್ತನ್ನು ಅತೀಕ್ರಮಣ ಮಾಡಿರಲಿಲ್ಲ. ಸುಕ್ರು ಕಾರೆ ಗೌಡಾ

ಹಾಗೂ ಸುಬ್ಬು ಕಾರೆ ಗೌಡಾ ಹಾಗೂ ವೆಂಕಟ್ರಮಣ ಕಾರೆ ಗೌಡಾ ರವರಿಗೆ ಸರ್ವೆನಂ . 1678/1 ಪೈಕಿ ಕ್ಷೇತ್ರ 15 ಗುಂಟೆ ಖರಾಬ 1 ಗುಂಟೆ 8 ಆಣೆ ಕ್ಷೇತ್ರವನ್ನು ಮಾರಾಟ ಮಾಡಿದಾಗ ಅದರಲ್ಲಿ ಟೆಂಪರವರಿ ಶೆಡ್ಡು ಮತ್ತು ಸಣ್ಣ ಸಣ್ಣ ಹೊಟೆಲ್ , ಪಂಪ್ ಸೆಟ್ ಶೆಡ್ಡು ಇತ್ತು. ಈ ವಿಚಾರವನ್ನು ನಾನು ನನ್ನ ದಸ್ತಾವೇಜಿನಲ್ಲಿ ನಮೂದು ಮಾಡಿದ್ದೇನೆ. ನಾಗಪ್ಪ ಗೋಯ್ದು ಗೌಡಾ ರವರಿಗೆ ಸರ್ವೆ ನಂ . 1678/1 ರಲ್ಲಿ ಮಾರಾಟ ಮಾಡುವಾಗ ದಸ್ತಾವೇಜಿನಲ್ಲಿ ಅವರು ಅತೀಕ್ರಮಣ ಮಾಡಿರುವುದನ್ನು ಬರೆದಿಲ್ಲ . ಅವರು ಅತೀಕ್ರಮಣ ಮಾಡಿ ಬೇಲಿ ಹಾಕಿದ್ದರು ಹಾಗೂ ಶೆಡ್ ನ್ನು ಹಾಕಿದ್ದರು. ಗಣಪತಿ ಮಾಣೇಶ್ವರ ಗೌಡಾರವರಿಗೆ ಸರ್ವೆ ನಂ. 1678/1 ರ ದಸ್ತಾವೇಜನ್ನು ಮಾಡಿಕೊಟ್ಟಾಗ ಅವರು ಅದರಲ್ಲಿ ತಾತ್ಕಾಲಿಕ ಗುಡಿಸಲು , ಪಂಪಸೆಟ್ ಹಾಗೂ ಸಣ್ಣ ಸಣ್ಣ ಹೊಟೆಲ್ ಗಳನ್ನು ಇಟ್ಟುಕೊಂಡಿದ್ದರು . ಈ ವಿಚಾರವನ್ನು ದಸ್ತಾವೇಜಿನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ದಿಲೀಪ ಉಮಾ ಮಹೇಶ್ವರ ನಾಯಕರವರಿಗೆ 2015 ಎಪ್ರಿಲ್ 10 ದಸ್ತಾವೇಜನ್ನು ಮಾಡಿದಾಗ ಸದರಿ ಸ್ವತ್ತಿನಲ್ಲಿ ತಾತ್ಕಾಲಿಕ ಶೆಡ್ಡು, ಸಣ್ಣ ಸಣ್ಣ ಗುಡಿಸಲು ಇತ್ತು . ಈ ವಿಚಾರವನ್ನು ದಸ್ತಾವೇಜಿನ್ಲಿ ನಮೂದು ಮಾಡಿಲ್ಲ ಎಂದರೆ ಸರಿ . ನಾಗೇಶ ಗಣೇಶ ಸೂರಿ ಇವರು ಗೋಕರ್ಣದಲ್ಲಿ ವೈದಿಕರಾಗಿದ್ದಾರೆ . ಗೋಕರ್ಣ ಗ್ರಾಮದ ಸರ್ವೆ ನಂ. 1678/5 ಕ್ಷೇತ್ರ 6 ಗುಂಟೆ ಕೊಟ್ಟಾಗ ಆ ಜಾಗದಲ್ಲಿ ಅವರು ಬೇಲಿ ಮತ್ತು ಸಣ್ಣ ಗುಡಿಸಲು ಇತ್ತು . ಈ ಮೇಲೆ ಹೇಳಿದ ಹೆಸರಿನ ಎಲ್ಲಾ ವ್ಯಕ್ತಿಳನ್ನು ಅಸಲು ದಾವೆ ಸಂಖ್ಯೆ 135/2011 ರಲ್ಲಿ ಪಕ್ಷಗಾರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಸರ್ವೆ ನಂ . 1678/1 ಮತ್ತು ಸರ್ವೆ ನಂ. 1679 ಈ ಸರ್ವೆ ನಂಬರಿಗೆ ಸಂಬಂಧಪಟ್ಟ ಕೇಸು ಆಗಿದ್ದು, ಭಾಗ್ಯರೇಖಾರವರ ಸರ್ವೆ ನಂಬರ ಬೇರೆ ಸರ್ವೆ ನಂಬರ , ಕಾರಣ ನನ್ನ ಹೆಂಡತಿಯನ್ನು ಪಾರ್ಟಿ ಮಾಡಿಲ್ಲ ಎಂದು ನುಡಿದಿರುತ್ತಾರೆ . ದಿಲೀಪ ಹಾಗೂ ನಾಗೇಶರವರನ್ನು ಪಾರ್ಟಿ ಮಾಡಿಲ್ಲ . ಓ ಎಸ್ ನಂ. 135/2011 ನ್ನು ನಾನೇ ದಾಖಲಿಸಿದ್ದೆ . ಆ ದಾಖಲಾತಿಗಳು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ . ನನ್ನ ಪ್ರತಿವಾದ ಪತ್ರದಲ್ಲಿ ಓ ಎಸ್ ನಂ . 135/2011 ಇದರ ಬಗ್ಗೆ ಬರೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗ ಅವರ ಪ್ರತಿವಾದ ಪತ್ರವನ್ನು ತೋರಿಸಲಾಗಿ ಓದಿ ನೋಡಿ ಅದರಲ್ಲಿ ಬರೆದಿಲ್ಲ ಆದರೆ 2 ನೇದರಲ್ಲಿ ನಮೂದು ಮಾಡಿರಬಹುದು, ನನಗೆ ನೆನಪಿಲ್ಲ. ಆ

ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಅಭ್ಯಂತರವಿಲ್ಲ . ಓ ಎಸ್ ನಂ. 135/2011 ದಾವೆಯ ಸ್ವತ್ತುಗಳು 2015 ರಲ್ಲಿ ಮಾರಾಟ ಮಾಡಿದ್ದರಿಂದ ದಾವೆಯನ್ನು ಹಿಂದೆ ಪಡೆಯಲಾಯಿತು ಎಂದು ಹೇಳಿದ್ದೇನೆ ಎಂದರೆ ಸರಿ . ಸಾಕ್ಷಿ ಪುನಃ ಆ ಆಸ್ತಿಗೆ ಸಂಬಂಧಪಟ್ಟಂತೆ ಒಂದು ಪ್ರಾಪರ್ಟಿ ಮಾತುಕತೆ ನಡೆಯುತ್ತಿತ್ತು, ಅವರು ಒಪ್ಪಿದ್ದರಿಂದ ಕೇಸನ್ನು ಹಿಂದೆ ತೆಗೆದುಕೊಳ್ಳಲಾಯಿತು ಎಂದು ನುಡಿದಿರುತ್ತಾರೆ . ಅದು ಯಾವ ಸರ್ವೆ ನಂಬರಿಗೆ ಮಾತುಕತೆ ನಡೆಯುತ್ತಿತ್ತು ನೆನಪಿಲ್ಲ. ಸಾಕ್ಷಿ ಪುನಃ ಸರ್ವೆ ನಂ. 1678 ಮತ್ತು 1679 ಗೆ ಮಾತುಕತೆ ನಡೆಯುತ್ತಿತ್ತು ಎಂದು ನುಡಿದಿರುತ್ತಾರೆ . ಆಸ್ತಿ ಖರೀದಿಗೆ ಸಂಬಂಧಪಟ್ಟಂತೆ ಮಾತುಕತೆ ನಡೆಯುತ್ತಿತ್ತು. ಆ ಸಮಯದಲ್ಲಿ ಅವರನ್ನು ದಾವಾದಲ್ಲಿ ಸೇರಿಸಿರಲಿಲ್ಲ. ಅವರು ಮಾತುಕತೆಗೆ ಬಂದಿದ್ದರಿಂದ ಅವರನ್ನು ದಾವೆಯಲ್ಲಿ ಸೇರಿಸಿರಲಿಲ್ಲ. ದಾವೆಯನ್ನು ದಾಖಲು ಮಾಡುವಾಗ ಅತೀಕ್ರಮಣ ಇತ್ತು. ನಾನು ಖರೀದಿಸುತ್ತೇನೆ ಸ್ವಲ್ಪ ಸಮಯ ಕೊಡಿ ಎಂದು ಕೇಳಿದ್ದರು , ಕಾರಣ ಅವರನ್ನು ಬಿಟ್ಟು ದಾವೆಯನ್ನು ದಾಖಲಿಸಿದ್ದೆ .

14. ದಾವಾ ಅ ಶೆಡೂಲ್ ಸ್ವತ್ತು ಇವು ಗೋಕರ್ಣದಲ್ಲಿ ಅತೀ ಪ್ರಮುಖವಾದಂತಹ ಸ್ಥಳದಲ್ಲಿ ಇರುವಂತಹ ಕ್ಷೇತ್ರಗಳು ಎಂದರೆ ಸರಿ. ಗೋಕರ್ಣ ಬಿಚಿಗೆ ದೇಶದ ಅಷ್ಟೇ ಅಲ್ಲ ವಿದೇಶದ ಜನರು ಕೂಡ ಬರುತ್ತಾರೆ ಎಂದರೆ ಸಾಕ್ಷಿ ಈಗ ಬರುತ್ತಿದ್ದಾರೆ ಎಂದು ನುಡಿದಿರುತ್ತಾರೆ . ಸುಕ್ರು ಕಾರೆ ಗೌಡಾ ಮತ್ತು ವೆಂಕಟ್ರಮಣ ಕಾರೆ ಗೌಡಾ ಇವರಿಗೆ ಮಾರಾಟ ಮಾಡಿದ ಆಸ್ತಿಯನ್ನು 1 ರಿಂದ 3 ನೇ ವಾದಿಯರಿಂದ ಮೋಸದಿಂದ ಕ್ರಯದ ಉದ್ದೇಶವನ್ನು ಸೇರಿಸಿ ಪಡೆದಂತಹ ಜಿಪಿಎ ಮೂಲಕ ಅತೀ ಹೀನ ಮೌಲ್ಯಕ್ಕೆ ಆಸ್ತಿಯನ್ನು ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸ್ವತ್ತಿನ ಬೆಲೆ 2,02,500/– ಕ್ಕಿಂತ ಜಾಸ್ತಿ ಇತ್ತು ಎಂದರೆ ಸರಿಯಲ್ಲ. ಹಣವನ್ನು ನಾನು ವಾದಿ , ವಾದಿಯರ ತಾಯಿ ಮತ್ತು 1 ನೇ ಪ್ರತಿವಾದಿಯ ಸಮ್ಮುಖದಲ್ಲಿ ಇವರ ಹಕ್ಕಿನ ಹಣವನ್ನು ಅವರ ತಾಯಿ ಕೈಯಲ್ಲಿ ಕೊಟ್ಟಿರುತ್ತೇನೆ. ಅವರಿಗೆ ಹಣವನ್ನು ಕೊಟ್ಟ ಬಗ್ಗೆ ನನ್ನ ಬಳಿ ದಾಖಲಾತಿ ಇಲ್ಲ , ನಗದು ರುಪಾದಲ್ಲಿ ಕೊಟ್ಟಿದ್ದೇನೆ. ನಗದು ರುಪಾದಲ್ಲಿ ಕೊಟ್ಟಿದ್ದೇನೆ ಎಂದು ತೋರಿಸಲು ನನ್ನ ಬಳಿ ದಾಖಲಾತಿ ಇಲ್ಲ.

15. ನಾಗಪ್ಪ ಗೋಯ್ದು ಗೌಡಾ ರವರಿಗೂ ಕೂಡ ನಾನು ಆಸ್ತಿಯನ್ನು ಅತೀ ಹೀನ ಕಿಮ್ಮತ್ತಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ . ಇದರಲ್ಲೂ ಕೂಡ ನಾನು ವಾದಿಯರಿಗೆ ಮಾರಾಟದ ಹಣವನ್ನು ನೀಡಿದ ಬಗ್ಗೆ ನನ್ನ ಬಳಿ ದಾಖಲಾತಿ ಇಲ್ಲ ಆದರೆ ಅವರ ತಾಯಿಗೆ ವಾದಿ ಮತ್ತು 1 ನೇ ಪ್ರತಿವಾದಿಯ ಸಮ್ಮುಖದಲ್ಲಿ ಹಣ ಕೊಟ್ಟಿದ್ದೇನೆ. ಗಣಪತಿ ಮಾಣಿ ಗೌಡಾ ರವರಿಗೂ ಕೂಡ ನಾನು ಆಸ್ತಿಯನ್ನು ಅತೀ ಹೀನ ಕಿಮ್ಮತ್ತಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ . ವಾದಿಯರ ಪಾಲಿಗೆ ಸಂಬಂಧಪಟ್ಟ ಹಣವನ್ನು ಅವರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ . ದಿಲೀಪ ಉಮಾ ಮಹೇಶ್ವರ ನಾಯಕರವರಿಗೊ ಕೂಡ ನಾನು ಆಸ್ತಿಯನ್ನು ಅತೀ ಹೀನ ಕಿಮ್ಮತ್ತು 4,90,000/- ರೂ.ಗಳಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಇದರಲ್ಲೂ ಕೂಡ ನಾನು ವಾದಿಯರಿಗೆ ಸಲ್ಲಬೇಕಾದ ಅವರ ಭಾಗದ ಹಣವನ್ನು ನೀಡಿಲ್ಲ ಎಂದರೆ ಸರಿಯಲ್ಲ.

16. ನಾಗೇಶ ಗಣೇಶ ಸೂರಿ ನನ್ನ ಆಪ್ತರು ಎಂದರೆ ಸರಿಯಲ್ಲ . ಸಾಕ್ಷಿ ನಮ್ಮ ಊರಿನವರು ಎಂದು ನುಡಿದಿರುತ್ತಾರೆ . ಇವರಿಗೆ ಸರ್ವೆನಂ. 1678/5 ರಲ್ಲಿರುವ ಕ್ಷೇತ್ರ 6 ಗುಂಟೆಯನ್ನು ನಾನು ಅತೀ ಹೀನ ಕಿಮ್ಮತ್ತು 2,40,000/- ರೂ.ಗಳಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಮೇಲ್ಕಂಡ ಎಲ್ಲಾ ವ್ಯಕ್ತಿಗಳಿಗೆ ಸ್ವತ್ತನ್ನು ಮಾರಾಟ ಮಾಡಲು ಜಿಪಿಎ ನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ . ಜಾಗದ ಅಭಿವೃದ್ಧಿಗೋಸ್ಕರ ನೀಡಿದ ಜಿಪಿಎ ನ್ನು ದುರುಪಯೋಗ ಪಡಿಸಿಕೊಂಡು ನಾನು ಸ್ವತ್ತನ್ನು ಈ ಮೇಲ್ಕಂಡ ವ್ಯಕ್ತಿಗಳಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ . ಕಾರಣ ಎಲ್ಲಾ ಮಾರಾಟ ದಸ್ತಾವೇಜುಗಳಿಗೆ ಕಾಯ್ದೆಯಡಿ ಯಾವುದೇ ಮಾನ್ಯತೆ ಇಲ್ಲ . ಅವು ಅನುರ್ಜಿತ ದಸ್ತಾವೇಜುಗಳು ಎಂದರೆ ಸರಿಯಲ್ಲ . ನಾಗೇಶ ಸೂರಿಯವರು ಖರೀದಿಸಿದ ಸ್ವತ್ತನ್ನು ಬಿಟ್ಟು ಉಳಿದ ಎಲ್ಲಾ ಸ್ವತ್ತುಗಳನ್ನು ಮಾರಾಟ ಮಾಡಿದ ಹಣವನ್ನು ವಾದಿಯರ ಮತ್ತು 1 ನೇ ಪ್ರತಿವಾದಿಯ ಸಮ್ಮುಖದಲ್ಲಿ ಅವರ ತಾಯಿಗೆ ನೀಡಿದ್ದೇನೆ. ನಾಗೇಶ ಸೂರಿಯವರಿಂದ ನಾನು ಹಣವನ್ನು ನಗದು ರೂಪದಲ್ಲಿ ಪಡೆದುಕೊಂಡಿದ್ದೇನೆ. ನಂತರ ಪ್ರತಿವಾದಿ ನಂ. 1 ರವರಿಗೆ ಅವರ ಅಂಶವನ್ನು ಬ್ಯಾಂಕ್ ಮುಖಾಂತರ ವರ್ಗಾಯಿಸಿದ್ದೇನೆ . ಎಷ್ಟು ಹಣ ಬ್ಯಾಂಕಿಗೆ ಹಾಕಿದ್ದೆ

ನೆನಪಿಲ್ಲ. ಅಕೌಂಟ್ ಸ್ಟೇಟ್ ಮೆಂಟ್ ನಲ್ಲಿ ಇದು ನಮೂದು ಇದೆ . ವಾದಿಯರ ಹಾಗೂ ಪ್ರತಿವಾದಿ ನಂ. 1 ರವರ ಅಂಶದ ಹಕ್ಕಿನ ಹಣವನ್ನು 1 ನೇ ಪ್ರತಿವಾದಿಯ ಅಕೌಂಟ್ ಗೆ ಹಾಕಿರುತ್ತೇನೆ. 1 ನೇ ಪ್ರತಿವಾದಿಯ ಅಕೌಂಟ್ ಗೆ ಹಣವನ್ನು ಹಾಕುವಾಗ ವಾದಿಯರ ಒಪ್ಪಿಗೆಯನ್ನು ತೆಗೆದುಕೊಂಡಿದ್ದೆ . 1 ನೇ ಪ್ರತಿವಾದಿ ವಾದಿಯರಿಗೆ ಹಣವನ್ನು ಸಂದಾಯ ಮಾಡಿದ ಬಗ್ಗೆ ನಾನು ಕನಪರಮೇಶನ್ ತೆಗೆದುಕೊಂಡಿಲ್ಲ. ನಾಗೇಶ ಸೂರಿಯವರ ಖರೀದಿಗೆ ಸಂಬಂಧಪಟ್ಟ ಹಣವನ್ನು 1 ನೇ ಪ್ರತಿವಾದಿಯ ಅಂಶಕ್ಕೆ ಅವರ ಖಾತೆಗೆ ಹಾಕಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಹಾಜರು ಪಡಿಸಿದ ನಿಪಿ -3 ರಿಂದ ನಿಪಿ-7 ರ ದಸ್ತಾವೇಜುಗಳಲ್ಲಿ ಪ್ರತಿಫಲದ ಮೊತ್ತ ವಾದಿಯರಿಗೆ ಸಂದಾಯ ಆಗಿರಲಿಲ್ಲ ಎಂದರೆ ಸರಿಯಲ್ಲ.

(ವಾದಿಯ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.